# ಭಗವದ್ಭಾವನೆ



ಎಲ್ಲಿಯವರೆಗೆ ವಿಷಯಾಸಕ್ತಿ ಇರುವುದೊ, ಕಾಮಕಾಂಚನದ ಮೇಲೆ ಪ್ರೀತಿ ಇರುವುದೊ, ಅಲ್ಲಿಯವರೆಗೆ ದೇಹಬುದ್ಧಿ ಹೋಗದು. ವಿಷಯಾಸಕ್ತಿ ಎಷ್ಟೆಷ್ಟು ಮಟ್ಟಿಗೆ ಕಡಿಮೆಯಾಗುವುದೊ ಅಷ್ಟಷ್ಟು ಮಟ್ಟಿಗೆ ಆತ್ಮಜ್ಞಾನದ ಕಡೆ ಮುಂದುವರಿಯಬಹುದು; ದೇಹಬುದ್ಧಿ ಕೂಡ ಕಡಿಮೆಯಾಗುತ್ತದೆ. ವಿಷಯಾಸಕ್ತಿ ಬೇರುಸಹಿತ ಹೊರಟು ಹೋದರೆ ಆತ್ಮಜ್ಞಾನ ದೊರಕುತ್ತದೆ. ಆಗ, ಆತ್ಮ ಬೇರೆ ದೇಹ ಬೇರೆ ಎಂಬ ಬೋಧೆಯಾಗುತ್ತದೆ. ತೆಂಗಿನಕಾಯಿಯ ನೀರು ಇಂಗದ ಮುನ್ನ ಅದನ್ನು ಮಚ್ಚಿನಿಂದ ಕತ್ತರಿಸಿ ತಿರುಳನ್ನು ಪ್ರತ್ಯೇಕ ಕರಟವನ್ನು ಪ್ರತ್ಯೇಕ ಮಾಡಬೇಕಾದರೆ ಕಷ್ಟಪಡಬೇಕಾಗುತ್ತದೆ. ಆದರೆ ಒಳಗೆ ನೀರು ಇಂಗಿಹೋಗಿ ಬಿಟ್ಟಿತು ಎಂದರೆ ತಿರುಳು ಒಳಗೆ ಸುಮ್ಮನೆ 'ಗಡಗಡ' ಎಂದು ಶಬ್ದ ಮಾಡುತ್ತದೆ.

ಭಗವಂತನನ್ನು ಪಡೆದರೆ ವ್ಯಕ್ತಿಯಲ್ಲಿ ಈ ಚಿಹ್ನೆ ಕಂಡು ಬರುತ್ತದೆ, ಆತ ತೆಂಗಿನ ಗಿಟಕಿನೋಪಾದಿಯಲ್ಲಿ ಆಗಿಬಿಡುತ್ತಾನೆ. — ದೇಹಬುದ್ಧಿ ಹೊರಟುಹೋಗುತ್ತದೆ. ದೇಹದ ಸುಖ ದುಃಖವು ತನ್ನ ಸುಖದುಃಖ ಎಂಬ ಭಾವನೆ ಆತನಿಗೆ ಉಂಟಾಗದು. ಆ ವ್ಯಕ್ತಿ ದೇಹದ ಸುಖವನ್ನು ಇಚ್ಛಿಸುವುದಿಲ್ಲ. ಜೀವನ್ಮುಕ್ತನಾಗಿ ಸುತ್ತಾಡುತ್ತಾನೆ.

ಭಗವನ್ನಾಮ ಶ್ರವಣಮಾತ್ರದಿಂದಲೆ ಪ್ರೇಮಾಶ್ರು ಮತ್ತು ಪುಲಕ ಉಂಟಾಗುವುದು ಕಂಡುಬಂದರೆ ಆಗ ಅರಿಯಬೇಕು, ಕಾಮಕಾಂಚನ ಆಸಕ್ತಿ ಹೊರಟುಹೋಗಿದೆ, ಭಗವಂತನ ಸಾಕ್ಷಾತ್ಕಾರ ದೊರೆತುಬಿಟ್ಟಿದೆ ಎಂದು. ಬೆಂಕಿಕಡ್ಡಿ ಒಣಗಿದ್ದರೆ ಒಂದನ್ನು ಗೀಚಿದರೇನೆ ಅದು ಭಗ್ ಎಂದು ಹತ್ತಿಕೊಂಡು ಬಿಡುತ್ತದೆ. ಅದೇನಾದರು ನೆನೆದಿದ್ದರೆ, ಒಂದೈವತ್ತು ಕಡ್ಡಿ ಗೀಚಿದರೂ ಏನು ಆಗದು. ಬರಿದೆ ಬೆಂಕಿಕಡ್ಡಿಗಳ ನಷ್ಟ. ವಿಷಯ ರಸದಲ್ಲಿ ನೆನೆದಿದ್ದರೆ, ಕಾಮಕಾಂಚನ ರಸದಲ್ಲಿ ಮನಸ್ಸು ನೆನೆದಿದ್ದರೆ, ಭಗವದುದ್ದೀಪನೆ ಉಂಟಾಗದು. ಕಂಡ ಆಟವನ್ನೆಲ್ಲ ಆಡು, ಅದೆಲ್ಲ ಬರಿದೆ ವಿಫಲ. ವಿಷಯರಸ ಒಣಗಿಹೋದರೆ ಒಡನೆಯೆ ಉದ್ದೀಪನೆ ಉಂಟಾಗಿಬಿಡುತ್ತದೆ.

ವ್ಯಾಕುಲನಾಗಿ ಭಗವತಿಯನ್ನು ಕರೆ. ಆಕೆಯ ದರ್ಶನ ದೊರೆತರೆ ವಿಷಯರಸ ಒಣಗಿಹೋಗಿಬಿಡುತ್ತದೆ; ಕಾಮಕಾಂಚನ ಆಸಕ್ತಿ ಎಲ್ಲಾ ಬಿಟ್ಟು ಹೋಗುತ್ತದೆ. ಆಕೆ ನಿನ್ನ ಸ್ವಂತ ತಾಯಿ ಎಂಬ ಬೋಧೆ ಉಂಟಾದರೆ ಈ ಕ್ಷಣವೆ ಹಾಗಾಗಿ ಬಿಡುತ್ತದೆ.

ವ್ಯಾಕುಲನಾಗಿ ಹಟಹಿಡಿದು ಆಕೆಯನ್ನು ಕೇಳು. ಗಾಳೀಪಟ ಕೊಂಡುಕೊಳ್ಳಲೋಸುಗ ತಾಯ ಸೆರಗನ್ನು ಹಿಡಿದು ದುಡ್ಡು ಕೇಳುತ್ತದೆ — ತಾಯಿ ಬಹುಶಃ ಆಗ ಬೇರೆ ಹೆಂಗಸರೊಡನೆ ಹರಟೆ ಹೊಡೆಯುತ್ತಿರಬೇಕು. ಮೊದಲು ಆಕೆಗೆ ಕೊಡಲು ಇಚ್ಛೆಯೇ ಇಲ್ಲ. ಹೇಳುತ್ತಾಳೆ, 'ಕೊಡೋದಿಲ್ಲ. ನಿಮ್ಮ ತಂದೆ ಬೇಡ ಅಂತ ಹೇಳಿ ಹೋಗಿದ್ದಾರೆ. ಅವರು ಬಂದರೆ ನೋಡು ಹೇಳಿ ಬಿಡುತ್ತೇನೆ. ಒಡನೆಯೆ ಹೋಗಿ ಗಾಳೀಪಟ ಕೊಂಡುಕೊಂಡು ಕೈಯೊ ಕಾಲೊ ಏನೊ ಒಂದು ಮಾಡಿಕೊಂಡು ಬಂದುಬಿಡುತ್ತೀಯೆ' ಎಂದು. ಆಗ ಮಗು ಅಳಲು ಆರಂಭಿಸುತ್ತದೆ. ಏನು ಮಾಡಿದರೂ ಬಿಡಲೊಲ್ಲದು. ತಾಯಿ ತನ್ನ ಗೆಳತಿಯರಿಗೆ ಹೇಳುತ್ತಾಳೆ: 'ದಯವಿಟ್ಟು ಒಂದು ಸ್ವಲ್ಪ ಕುಳಿತುಕೊಂಡಿರಿ. ಈ ಮಗುವನ್ನು ಸ್ವಲ್ಪ ಸಮಾಧಾನಪಡಿಸಿ ಬರುತ್ತೇನೆ' ಎಂದು. ಬಳಿಕ ಪೆಟ್ಟಿಗೆಯನ್ನು ತೆರೆದು ಮೂರು ಕಾಸನ್ನು ಬಿಸಾಕುತ್ತಾಳೆ.

ವ್ಯಾಕುಲ ಹೃದಯದಿಂದ ಆತನಿಗೆ ಪ್ರಾರ್ಥನೆ ಸಲ್ಲಿಸು; ಆತನಿಗಾಗಿ ಅಳು. ಆಗ ಚಿತ್ತಶುದ್ಧಿ ಉಂಟಾಗುತ್ತದೆ. ನಿರ್ಮಲ ವಾದ ನೀರಿನಲ್ಲಿ ಸೂರ್ಯನ ಪ್ರತಿಬಿಂಬವನ್ನು ನೋಡಬಹುದು. ಭಕ್ತನ 'ನಾನು' ಎಂಬ ರೂಪಿನ ಕನ್ನಡಿಯಲ್ಲಿ ಸಗುಣಬ್ರಹ್ಮನ, ಆದ್ಯಾಶಕ್ತಿಯ ದರ್ಶನ ದೊರೆಯುತ್ತದೆ. ಆದರೆ ಕನ್ನಡಿಯನ್ನು ಬಹಳ ಚೆನ್ನಾಗಿ ಒರೆಸಬೇಕು. ಕೊಳೆ ಕುಳಿತಿದ್ದರೆ ಸರಿಯಾದ ಪ್ರತಿಬಿಂಬ ಬೀಳದು.

ಯಾರಿಗೆ ಭಗವದ್ಭಾವನೆಯ ಉದ್ದೀಪನೆಯಾಗುತ್ತದೆ? ವಿಷಯಾತ್ಮಿಕ ಬುದ್ಧಿಯನ್ನು ತ್ಯಜಿಸಿರತಕ್ಕವರಿಗೆ. ಯಾರ ವಿಷಯರಸ ಬತ್ತಿಹೋಗಿರುವುದೊ ಅವರಿಗೆ ಒಂದು ಸ್ವಲ್ಪದರಿಂದಲೆ ಭಗವದ್ಭಾವನೆಯ ಉದ್ದೀಪನೆಯಾಗಿಬಿಡುತ್ತದೆ.

ಮಗುವಿನಂಥ ವಿಶ್ವಾಸಬೇಕು. ಮಗು ತಾಯನ್ನು ನೋಡಲು ಯಾವ ರೀತಿಯಾದ ವ್ಯಾಕುಲತೆಯನ್ನು ತೋರಿಸುವುದೊ, ಆ ರೀತಿಯಾದ ವ್ಯಾಕುಲತೆ ಬೇಕು. ಅಂಥಾ ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೆಯೇ.

ಶ್ರೀರಾಮಕೃಷ್ಣ ವಚನವೇದದಿಂದ